ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

File No: DTE-ADMI0ACM2/27/2020

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು–560 001.
ದಿನಾಂಕ:08–10–2020.

–:: ಸು ತ್ತೋ ಲೆ ::–

ವಿಷಯ: **2020–21ನೇ** ಸಾಲಿನಲ್ಲಿ ಖಾಸಗಿ ಪಾಲಿಟೆಕ್ನಿಕ್ ವಿದ್ಯಾರ್ಥಿಗಳ 03ನೇ ಸೆಮಿಸ್ಟರ್, 5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಪ್ರವೇಶ, ವರ್ಗಾವಣೆ ಮತ್ತು ಮರು ಪ್ರವೇಶದ ಬಗ್ಗೆ ಸೂಚನೆಗಳು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 222 ಟಿಪಿಇ 2012, ದಿ:17/09/2012.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 99 ಟಿಪಿಟಿ01, ದಿ:4/3/2009.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 11 ಟಿಪಿಇ 07, ದಿ:3/12/07.
4. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಅಧಿಕೃತ ಜ್ಞಾಪನ ಸಂ. ಬಿಟಿಇ/11/ಇಎಸಿಎಸ್(2)/2019–20, ದಿ:13–07–2020.

–00000000–

2020–21ನೇ ಸಾಲಿಗೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ತೃತೀಯ/ಐದನೇ ಸೆಮಿಸ್ಟರ್ ಡಿಪ್ಲೋಮಾಗೆ ಪ್ರವೇಶ, ಮರುಪ್ರವೇಶ ಮತ್ತು ಪ್ರವೇಶ ಪಡೆದ ನಂತರ ಅನೇಕ ವಿದ್ಯಾರ್ಥಿಗಳು ತಮ್ಮ ವೈಯುಕ್ತಿಕ ತೊಂದರೆಗಳನ್ನು ನಿವೇದಿಸಿಕೊಂಡು ತೃತೀಯ/ಐದನೇ ಸೆಮಿಸ್ಟರ್ ಡಿಪ್ಲೋಮಾಗೆ ವಿವಿಧ ಹಂತದಲ್ಲಿ ವರ್ಗಾವಣೆ ಬಯಸುವ ಅಭ್ಯರ್ಥಿಗಳ ಸಂಬಂಧದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಯನ್ನು ಕೆಳಗೆ ನಮೂದಿಸಲಾಗಿದೆ.

1) ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವರ್ಗಾವಣೆಯನ್ನು ನಿಗಧಿತ ಅವಧಿಯ ಒಳಗೆ ಮುಗಿಸುವ ದೃಷ್ಟಿಯಿಂದ ಕೆಳಗೆ ನಮೂದಿಸಿರುವ ಅವಧಿಯ ಒಳಗೆ ಇಲಾಖೆಗೆ ಸಲ್ಲಿಸಿದ ಪ್ರಕರಣಗಳನ್ನು ಮಾತ್ರ ಪರಿಶೀಲಿಸಿ ಅನುಮೋದನೆ ನೀಡುವ ಬಗ್ಗೆ ಪರಿಗಣಿಸಲಾಗುವುದು.

2) ಈ ಸುತ್ತೋಲೆಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಸ್ಪಷ್ಟ ಮಾಹಿತಿಯನ್ನು ವಿದ್ಯಾರ್ಥಿಗಳಿಂದ ಪಡೆದು, ಸಂಬಂಧಿಸಿದ ಪಾಲಿಟೆಕ್ನಿಕ್ ಪ್ರಿನ್ಸಿಪಾಲರ ಶಿಫಾರಸ್ಸಿನೊಂದಿಗೆ ನಿಗದಿತ ಅವಧಿಯೊಳಗೆ ಇಲಾಖೆಗೆ ಖುದ್ದಾಗಿ ಅರ್ಜಿ ಸಲ್ಲಿಸಬೇಕೆಂದು ತಿಳಿಸಲಾಗಿದೆ. ಬಂದಂತಹ ಅರ್ಜಿಗಳನ್ನು ಪರಿಶೀಲಿಸಿ ವರ್ಗಾವಣೆಯು ಕ್ರಮವಾಗಿದ್ದಲ್ಲಿ ಅರ್ಜಿ ಸಲ್ಲಿಸಿದ ದಿನವೇ ವರ್ಗಾವಣೆಗೆ ಅನುಮತಿ ನೀಡುವ ಬಗ್ಗೆ ಪರಿಗಣಿಸಲಾಗುವುದು. ಈ ಇಲಾಖೆಯಿಂದ ವರ್ಗಾವಣೆ ಆದೇಶ ಬರುವವರೆಗೆ ವಿದ್ಯಾರ್ಥಿಯು ಹಿಂದಿನ ಸಂಸ್ಥೆಯಲ್ಲಿಯೇ ವ್ಯಾಸಂಗ ಮಾಡುತ್ತಿರಬೇಕು. ವರ್ಗಾವಣೆ ಆದೇಶ ಬಂದ ಮೇಲೆ ವಿದ್ಯಾರ್ಥಿಯ ಹಾಜರಾತಿ ಹಾಗೂ ಇತರೆ ಮಾಹಿತಿಯೊಂದಿಗೆ ವಿದ್ಯಾರ್ಥಿಯು ವರ್ಗಾವಣೆ ಹೊಂದಿದ ಸಂಸ್ಥೆಗೆ ವರದಿ ಮಾಡುವುದು.

3) ಈ ಸೂಚನೆಗಳನ್ನು ಎಲ್ಲಾ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಕಡ್ಡಾಯವಾಗಿ ಅನುಸರಿಸಿ ಕೆಳಗೆ ನಮೂದಿಸಿರುವ ಅವಧಿಯೊಳಗೆ ವರ್ಗಾವಣೆ ಪ್ರಕರಣಗಳನ್ನು ನಿರ್ದೇಶನಾಲಯಕ್ಕೆ ಖುದ್ದಾಗಿ/ವಿದ್ಯಾರ್ಥಿಗಳ ಮೂಲಕ ಕಳುಹಿಸಿದಲ್ಲಿ ವರ್ಗಾವಣೆ ಬಗ್ಗೆ ಸಕಾಲಿಕ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ. ತಡವಾಗಿ ಬಂದಂತಹ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಪ್ರಕರಣಗಳನ್ನು ನಿರ್ದೇಶನಾಲಯಕ್ಕೆ ಕಳುಹಿಸಬಾರದೆಂದು ತಿಳಿಸಲಾಗಿದೆ.

ತೃತೀಯ ಸೆಮಿಸ್ಟರ್, ಐದನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಪ್ರವೇಶ ನೀಡುವ ಬಗ್ಗೆ ಹಾಗೂ ವರ್ಗಾವಣೆಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ವೇಳಾ ಪಟ್ಟಿ.

1. ತೃತೀಯ ಸೆಮಿಸ್ಟರ್, ಐದನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಪ್ರವೇಶ ನೀಡಲು ಅಂತಿಮ ದಿನಾಂಕ: **23-10-2020.**
2. **0202-02-101-0-04-Polytechnic ಲೆಕ್ಕಶೀರ್ಷಿಕೆಗೆ** ವರ್ಗಾವಣೆ ಶುಲ್ಕ ₹ 1,000/-ನ್ನು ದಿ: **29-10-2020** ರ ಒಳಗೆ ಸರ್ಕಾರದ ಖಜಾನೆ ಅಥವಾ ಸಮೀಪದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಪಾವತಿ ಮಾಡಿರಬೇಕು.
3. ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಎರಡೂ ಪಾಲಿಟೆಕ್ನಿಕ್‌ಗಳ ಎನ್‌ಓಸಿ, ಅಭ್ಯರ್ಥಿಯ ಮನವಿ ಹಾಗೂ ವರ್ಗಾವಣೆ ಶುಲ್ಕಕ್ಕೆ ಸಂಬಂಧಿಸಿದಂತೆ ಮೂಲ ಚಲನ್ ಅಥವಾ ರಸೀದಿಯೊಂದಿಗೆ ವರ್ಗಾವಣೆ ಮೇರೆಗೆ ಪ್ರವೇಶ ಕೋರುವ ಪಾಲಿಟೆಕ್ನಿಕ್‌ನಿಂದ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವ ಅಂತಿಮ ದಿ:**05-11-2020.**
4. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕಗಳನ್ನು ಕಡ್ಡಾಯವಾಗಿ ಪ್ರವೇಶ ಶುಲ್ಕದ ಜೊತೆಗೆ ಪಾವತಿ ಮಾಡತಕ್ಕದ್ದು.

ಅಭ್ಯರ್ಥಿಗಳ ಮರುಪ್ರವೇಶಕ್ಕೆ ನಿಗದಿಪಡಿಸಿರುವ ಅಂತಿಮ ದಿನಾಂಕ

1, 3 ಮತ್ತು 5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ರಿಪೀಟರ್ ಆಗಿ ಸೇರಬಯಸುವ ವಿದ್ಯಾರ್ಥಿಗಳ ಪ್ರವೇಶದ ಅಂತಿಮ ದಿನಾಂಕ	ರಿಪೀಟರ್ ಪ್ರವೇಶವನ್ನು ರಿಪೀಟರ್ ಕೋಟಾದ ಪ್ರವೇಶ ನಿಯಮಗಳ ಪ್ರಕಾರ ಶೇ. 10ರ ಮಿತಿಯಲ್ಲಿ ಆಯಾ ಕೋರ್ಸಿಗೆ ದಿ: **23-10-2020** ರ ಒಳಗೆ ಪ್ರವೇಶ ನೀಡುವುದು. ರಿಪೀಟರ್ ಪ್ರವೇಶದಲ್ಲಿ ಯಾವುದೇ ಕೋರ್ಸ್ ಬದಲಾವಣೆಗೆ ಅವಕಾಶವಿರುವುದಿಲ್ಲ. **ರಿಪೀಟರ್ ಆಗಿ ಒಬ್ಬ ವಿದ್ಯಾರ್ಥಿಗೆ ಒಂದು ಸಾರಿ ಮಾತ್ರ ಹಾಗೂ ವಿದ್ಯಾರ್ಥಿಯು ಮೊದಲು ಪ್ರವೇಶ ಪಡೆದ ವರ್ಷದಿಂದ ಮೂರು ವರ್ಷದ ಅವಧಿಯೊಳಗೆ ಮಾತ್ರ ರಿಪೀಟರ್ ಆಗಿ ಪ್ರವೇಶ ನೀಡಲು ಅವಕಾಶವಿರುತ್ತದೆ.** ರಿಪೀಟರ್ ಪ್ರವೇಶದ ಅನುಮೋದನೆಗೆ ಸಂಬಂಧಿಸಿದಂತೆ ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಪ್ರತ್ಯೇಕವಾಗಿ ನಿಗಧಿತ ಅವಧಿ ಒಳಗೆ ಪ್ರಸ್ತಾವನೆ ಸಲ್ಲಿಸುವುದು.

ವಿಶೇಷ ಸೂಚನೆ:

1. ಖಾಸಗಿ ಪಾಲಿಟೆಕ್ನಿಕ್‌ನಿಂದ ಅನುದಾನಿತ ಅಥವಾ ಸರ್ಕಾರಿ ಪಾಲಿಟೆಕ್ನಿಕ್‌ಗೆ ವರ್ಗಾವಣೆ ನೀಡಲು ಅವಕಾಶವಿರುವುದಿಲ್ಲ. ಆದಾಗ್ಯೂ **5ನೇ ಸೆಮಿಸ್ಟರ್** ಖಾಸಗಿ ಪಾಲಿಟೆಕ್ನಿಕ್‌ನಿಂದ ಅನುದಾನಿತ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿ ಕೋಟಾದ ಸ್ಥಾನಗಳಡಿಯಲ್ಲಿ ವರ್ಗಾವಣೆಗೆ ಪರಿಗಣಿಸಬಹುದಾಗಿದೆ.
2. 03 ಮತ್ತು 05ನೇ ಸೆಮಿಸ್ಟರ್‌ಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವುದನ್ನು ಖಚಿತಪಡಿಸಿಕೊಂಡು ಪ್ರವೇಶ ನೀಡತಕ್ಕದ್ದು. 01 ರಿಂದ 02ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ 04 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣಗೊಂಡಿದಲ್ಲಿ ಮತ್ತು 01 ರಿಂದ 04ನೇ ಸೆಮಿಸ್ಟರ್ ಪರಿಕ್ಷೆಗಳಲ್ಲಿ 04 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣಗೊಂಡಿದಲ್ಲಿ ಅಂತಹ ವಿದ್ಯಾರ್ಥಿಗಳು 03 & 05ನೇ ಸೆಮಿಸ್ಟರ್ ಪ್ರವೇಶ ಪಡೆಯಲು ಅರ್ಹರಿರುವುದಿಲ್ಲ.
3. **ಕೋವಿಡ್-19 ಹಿನ್ನೆಲೆಯಲ್ಲಿ 2019-20ನೇ ಸಾಲಿನ 02 & 04 ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು ಮುಂದಿನ 03ನೇಯ ಮತ್ತು 05ನೇಯ ಸೆಮಿಸ್ಟರ್‌ಗಳಿಗೆ ತೇರ್ಗಡೆಗೊಳಿಸುವ ಸಂಬಂಧ, ಉಲ್ಲೇಖ(4)ರಲ್ಲಿ ರೂಪಿಸಿರುವ ಮಾನದಂಡಗಳನ್ನು ಅನುಸರಿಸಿ ಪ್ರಸಕ್ತ ಸಾಲಿಗೆ ಮಾತ್ರ ಅನ್ವಯವಾಗುವಂತೆ 03 ಮತ್ತು 05ನೇ ಸಮಿಸ್ಟರ್‌ಗಳಿಗೆ ಪ್ರವೇಶ ಪಡೆಯಲು ಕ್ರಮಜರುಗಿಸತಕ್ಕದ್ದು.**
4. ನಿರ್ದೇಶನಾಲಯದಿಂದ ವರ್ಗಾವಣೆಗೆ ಸಂಬಂಧಿಸಿದಂತೆ ಅನುಮೋದನೆ ಬರುವವರಿಗೆ ಅಭ್ಯರ್ಥಿಯು ಹಿಂದಿನ ಪಾಲಿಟೆಕ್ನಿಕ್‌ನಲ್ಲೇ ವ್ಯಾಸಂಗ ಮಾಡುತ್ತಿರುವ ಷರತ್ತಿಗೆ ಒಳಪಟ್ಟಿರುತ್ತದೆ.

5. **ಸಂಖ್ಯಾಧಿಕ ಸೀಟುಗಳ (Supernumerary Seats) ಕೋಟಾದಡಿ (SNQ QUOTA) ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕೋರ್ಸು ಬದಲಾವಣೆ ಹಾಗೂ ಪಾಲಿಟೆಕ್ನಿಕ್ ವರ್ಗಾವಣೆಗೆ ಅವಕಾಶವಿರುವುದಿಲ್ಲ.**

6. 02, 04, 06ನೇ ಸೆಮಿಸ್ಟರ್ ವರ್ಗಾವಣೆಗೆ ಅವಕಾಶವಿರುವುದಿಲ್ಲ.

7. ನಿಗದಿಪಡಿಸಲಾಗಿರುವ ಪ್ರವೇಶ ದಿನಾಂಕವು ಅಂತಿಮವಾಗಿದ್ದು ಪ್ರಿನ್ಸಿಪಾಲರು ಈ ಸಂಗತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು ಪ್ರವೇಶ ಪ್ರಕ್ರಿಯೆಯನ್ನು ನಿಗದಿಪಡಿಸಲಾದ ದಿನಾಂಕದೊಳಗೆ ಮುಗಿಸತಕ್ಕದ್ದು.

8. ವರ್ಗಾವಣೆ/ ರಿಪೀಟರ್ ಆಗಿ ಪ್ರವೇಶ ನೀಡುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ನಿಗದಿಪಡಿಸಲಾದ ಪ್ರವೇಶ ಸಂಖ್ಯೆಯ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ಜರುಗಿಸತಕ್ಕದ್ದು.

9. 2020–21ನೇ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ವ್ಯಾಸಂಗಕ್ಕೆ ಮರುಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಮಾತ್ರ ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30–06–2018ರ ಪ್ರಕಾರ ಪರೀಷ್ಕೃತ ಬೋಧನಾ ಶುಲ್ಕವನ್ನು ವಸೂಲಿ ಮಾಡುವುದು.

10. ಪ್ರತಿ ಸೆಮಿಸ್ಟರ್‌ಗೂ ವಿದ್ಯಾರ್ಥಿಗಳು ನಿಗದಿಪಡಿಸಲಾದ ಶುಲ್ಕವನ್ನು ನಿಗದಿಪಡಿಸಿದ ದಿನಾಂಕದೊಳಗೆ ಪಾವತಿಸಿದ ನಂತರವೇ ತರಗತಿಗೆ ಹಾಜರಾಗಲು ಅನುಮತಿ ಮತ್ತು ಹಾಜರಾತಿ ನೀಡತಕ್ಕದ್ದು. ತಡವಾದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ನಿರ್ದೇಶನಾಲಯಕ್ಕೆ ಸಲ್ಲಿಸಬಾರದು.

11. ಕೋವಿಡ್–19 ಹಿನ್ನಲೆಯಲ್ಲಿ ಕರೋನಾ ಸಾಂಕ್ರಾಮಿಕ ಪಿಡುಗು ನಿಯಂತ್ರಣ ಮತ್ತು ಹರಡುವಿಕೆಯನ್ನು ತೆಡಗಟ್ಟುವಲ್ಲಿ ಅನುಸರಿಸಬೇಕಾದ ಮುನ್ನಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಮೇಲೆ ನಮೂದಿಸಿರುವ ಮಾರ್ಗಸೂಚಿಗಳನ್ವಯ ನಿಗಧಿತ ಅವಧಿಯ ಒಳಗೆ ಪ್ರವೇಶ ಪ್ರಕ್ರಿಯೆಯನ್ನು ಮುಗಿಸತಕ್ಕದ್ದು.

12. ಕೋವಿಡ್–19 ಹಿನ್ನೆಲೆಯಲ್ಲಿ ಪ್ರವೇಶ, ರಿಪೀಟರ್ ಹಾಗೂ ವರ್ಗಾವಣೆ ಸಂಬಂಧ ವಿದ್ಯಾರ್ಥಿಗಳು ಹಾಗೂ ಪೋಷಕರುಗಳು ಇಲಾಖೆಗೆ ಬರುವುದನ್ನು ನಿಷೇಧಿಸಲಾಗಿದೆ. ವರ್ಗಾವಣೆ ಮೇರೆಗೆ ಪ್ರವೇಶ ಮಾಡಿಕೊಳ್ಳುವ ಎಲ್ಲಾ ಖಾಸಗಿ ಪಾಲಿಟೆಕ್ನಿಕ್ ಪ್ರಾಂಶುಪಾಲರು ಗಮನದಲ್ಲಿಟ್ಟುಕೊಂಡು ಎರಡು ಪಾಲಿಟೆಕ್ನಿಕ್‌ಗಳ ನಿರಾಪೇಕ್ಷಣ ಪತ್ರಗಳು(ಎನ್.ಓ.ಸಿ), ಧೃಡೀಕೃತ ಹಿಂದಿನ ತರಗತಿಯ ಅಂಕಪಟ್ಟಿಗಳು ಹಾಗೂ ಸರ್ಕಾರದ ಖಜಾನೆ ಅಥವಾ ಸಮೀಪದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಪಾವತಿ ಮಾಡಿರುವ ವರ್ಗಾವಣೆ ಶುಲ್ಕದ ಮೂಲ ಪ್ರತಿಗಳನ್ನು ನಿಗಧಿಪಡಿಸಿದ ವೇಳಾಪಟ್ಟಿಯಂತೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ.

ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರು

ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ– ಸೂಕ್ತ ಮಾಹಿತಿ ಹಾಗೂ ಅನುಸರಣೆಗಾಗಿ.

ಪ್ರತಿ ಇವರಿಗೆ ಮಾಹಿತಿಗಾಗಿ:

1. ಆಯುಕ್ತರವರ ಆಪ್ತಶಾಖೆಗೆ.
2. ನಿರ್ದೇಶಕರವರ ಆಪ್ತಶಾಖೆಗೆ.
3. ಕಾರ್ಯದರ್ಶಿಯವರ ಆಪ್ತಶಾಖೆಗೆ.
4. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ.
5. ಇ–ಗವರ್ನೆನ್ಸ್ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
6. ಆರ್.ಡಿ.ಎಂ ವಿಭಾಗಗಳಿಗೆ.
7. ಇಆರ್‌ಎಸ್(3) ವಿಭಾಗಕ್ಕೆ.
8. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಪಾಲಿಟೆಕ್ನಿಕ್ ಬದಲಾವಣೆಗಾಗಿ ಅರ್ಜಿ

(ಖಾಸಗಿ ಪಾಲಿಟೆಕ್ನಿಕ್‌ಗೆ ಸಂಬಂಧಿಸಿದಂತೆ)

(ನಮೂನೆ–1)

(ವಿದ್ಯಾರ್ಥಿ ಭರ್ತಿ ಮಾಡಬೇಕಾದುದು)

1. ವಿದ್ಯಾರ್ಥಿಯ ಹೆಸರು ಮತ್ತು ಪೂರ್ಣ ವಿಳಾಸ _____

2. ವಿದ್ಯಾರ್ಥಿಯ ತಂದೆಯ ಹೆಸರು _____

3. ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ತರಗತಿ/ಕೋರ್ಸ ಮತು ಪಾಲಿಟೆಕ್ನಿಕ್ ಹೆಸರು _____

_____

4. ಅಭ್ಯರ್ಥಿಯು ಯಾವ ಪಾಲಿಟೆಕ್ನಿಕ್ ಮತ್ತು ತರಗತಿ ಹಾಗೂ ಕೋರ್ಸ್‌ಗೆ ವರ್ಗಾವಣೆ ಕೋರಲಾಗಿದೆ

_____

5. ಹಿಂದಿನ ಡಿಪ್ಲೋಮಾ ತರಗತಿಯಲ್ಲಿ ವ್ಯಾಸಂಗ ಮಾಡಿದ ವರ್ಷ ಮತ್ತು ನೋಂದಣಿ ಸಂಖ್ಯೆ

_____

6. ಪಾಲಿಟೆಕ್ನಿಕ್ ವರ್ಗಾವಣೆಗೆ ಸಂಬಂಧಿಸಿದಂತೆ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸುವುದು_____

_____

ಲಗತ್ತಿಸಬೇಕಾದ ಅಡಕಗಳು

(1) ಹಿಂದಿನ ತರಗತಿಯ ಅಂಕಪಟ್ಟಿ : ಅಂಕಪಟ್ಟಿಗಳು

(2) ದಿನಾಂಕ: 29–10–2020 ರ ಒಳಗೆ **0202–02–101–0–04–Polytechnic** ಲೆಕ್ಕಶೀರ್ಷಿಕೆಗೆ ವರ್ಗಾವಣೆ ಶುಲ್ಕ ₹ 1,000/- ನ್ನು ಪಾವತಿಸಿರುವ ಬಗ್ಗೆ ಚಲನ್ ಅಥವ ರಸೀದಿ (ಸರ್ಕಾರಿ ಖಜಾನೆ ಅಥವ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಜಮಾ ಮಾಡಿರಬೇಕು)

(3) ಎರಡೂ ಪಾಲಿಟೆಕ್ನಿಕ್‌ಗಳ ಎನ್.ಓ.ಸಿ.

ತಂದೆ/ಪೋಷಕರ ಸಹಿ

ವಿದ್ಯಾರ್ಥಿಯ ಸಹಿ

(ನಮೂನೆ–2)

ಅಭ್ಯರ್ಥಿಯು ವ್ಯಾಸಂಗ ಮಾಡುತ್ತಿರುವ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರ ಶಿಫಾರಸ್ಸು

ಸಂಖ್ಯೆ: _____ ದಿನಾಂಕ:_____

ಪಾಲಿಟೆಕ್ನಿಕ್‌ನ ಕೋಡ್ ಸಂಖ್ಯೆ:_____

ವಿದ್ಯಾರ್ಥಿಯು ಒದಗಿಸಿದ ಮಾಹಿತಿಯನ್ನು ಖುದ್ದು ಪರಿಶೀಲಿಸಲಾಗಿದೆ. ಮೇಲ್ಕಂಡ ವಿದ್ಯಾರ್ಥಿಯು ಈ ಪಾಲಿಟೆಕ್ನಿಕ್‌ನಲ್ಲಿ ತೃತೀಯ / ಅಂತಿಮ ಸೆಮಿಸ್ಟರ್ ಡಿಪ್ಲೋಮಾ ತರಗತಿಗೆ ನಿಗಧಿತ ಅವಧಿಯೊಳಗೆ ಪ್ರವೇಶ ಪಡೆದಿದ್ದು, ಪ್ರಸ್ತುತ ಬೇರೊಂದು ಪಾಲಿಟೆಕ್ನಿಕ್‌ನಲ್ಲಿ ವ್ಯಾಸಂಗ ಮುಂದುವರೆಸಲು ಕೋರಿರುವುದನ್ನು ವಿದ್ಯಾರ್ಥಿಯು ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ ವಿದ್ಯಾರ್ಥಿಯ ವರ್ಗಾವಣೆಗೆ ಈ ಪಾಲಿಟೆಕ್ನಿಕ್‌ನ ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ಮತ್ತು ನಿಯಮಗಳ ಪ್ರಕಾರ ವಿದ್ಯಾರ್ಥಿಯು ವರ್ಗಾವಣೆಗೆ ಅರ್ಹರಿರುವರೆಂದು ಧೃಡೀಕರಿಸಲಾಗಿದೆ ಹಾಗೂ ಅಭ್ಯರ್ಥಿಯ ಕೋರಿಕೆಯಂತೆ ಪಾಲಿಟೆಕ್ನಿಕ್ ಬದಲಾವಣೆಗೆ ಶಿಫಾರಸ್ಸು ಮಾಡಲಾಗಿದೆ. ವ್ಯಾಸಂಗದ ಅವಧಿಯಲ್ಲಿ ಅಭ್ಯರ್ಥಿಯ ಗುಣ ಮತ್ತು ನಡತೆಯು ಸಮರ್ಪಕವಾಗಿತ್ತು ಎಂದು ಧೃಡೀಕರಿಸಲಾಗಿದೆ ಹಾಗೂ **ಸದರಿ ವಿದ್ಯಾರ್ಥಿಯು SNQ ಕೋಟಾದಡಿ ಪ್ರವೇಶ ಪಡೆದಿರುವುದಿಲ್ಲವೆಂದು ಧೃಡೀಕರಿಸಲಾಗಿದೆ.** ವಿವರವನ್ನು ಕೆಳಗೆ ನಮೂದಿಸಲಾಗಿದೆ.

1) ಅಭ್ಯರ್ಥಿಯ ಹೆಸರು: _____
2) ಪ್ರವೇಶ ಪಡೆದ ವರ್ಷ/ತರಗತಿ/ಕೋರ್ಸ್/ನೋದಣಿ ಸಂಖ್ಯೆ: _____
3) ನಿರ್ದೇಶನಾಲಯದಿಂದ ಪ್ರವೇಶಾನುಮೋದನೆ ಪಡೆದಿರುವ ಬಗ್ಗೆ ದಾಖಲೆಯ ಸಂಖ್ಯೆ _____

ಸ್ಥಳ :
ದಿನಾಂಕ :

ಪ್ರಿನ್ಸಿಪಾಲರ ಸಹಿ ಮತ್ತು ಮೊಹರು

ವರ್ಗಾವಣೆ ಮೇರೆಗೆ ಪ್ರವೇಶ ಮಾಡಿಕೊಳ್ಳುವ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರ ಶಿಫಾರಸ್ಸು

ಸಂಖ್ಯೆ: _____ ದಿನಾಂಕ: _____

ಪಾಲಿಟೆಕ್ನಿಕ್‌ನ ಕೋಡ್ ಸಂಖ್ಯೆ: _____

ಅಭ್ಯರ್ಥಿಯ ಮೇಲ್ಕಂಡ ದಾಖಲೆಗಳನ್ನು ಪರಿಶೀಲಿಸಲಾಗಿದೆ. ವಿದ್ಯಾರ್ಥಿಯು ತೆಗೆದುಕೊಳ್ಳಲು ಬಯಸಿದ ಕೋರ್ಸ್ ಈ ಪಾಲಿಟೆಕ್ನಿಕ್‌ನಲ್ಲಿ ಭೋದಿಸಲಾಗುತ್ತಿದ್ದು, ಪ್ರಸ್ತುತ ಈ ಕೋರ್ಸ್‌ನ ತೃತೀಯ / ಅಂತಿಮ ಸೆಮಿಸ್ಟರ್ ಡಿಪ್ಲೋಮಾದಲ್ಲಿ **ಇಂಟೇಕ್ ಮಿತಿಯೊಳಗೆ ಸ್ಥಾನ ಖಾಲಿ ಇರುವುದನ್ನು ಗಣನೆಗೆ ತೆಗದುಕೊಂಡು** ಮೇಲ್ಕಂಡ ಅಭ್ಯರ್ಥಿಗೆ ಕೆಳಕಂಡಂತೆ ವರ್ಗಾವಣೆ ಮೇರೆಗೆ ದಿನಾಂಕ: _____ ರಂದು ಪ್ರವೇಶ ನೀಡಲಾಗಿದೆ.

1) ಅಭ್ಯರ್ಥಿಯ ಹೆಸರು: _____
2) ವರ್ಗಾವಣೆ ಮೇರೆಗೆ ಪ್ರವೇಶ ನೀಡಿರುವ ತರಗತಿ ಹಾಗೂ ಕೋರ್ಸ್/ನೋದಣಿ ಸಂಖ್ಯೆ:_____
_____

ಸ್ಥಳ :
ದಿನಾಂಕ :

ಪ್ರಿನ್ಸಿಪಾಲರ ಸಹಿ ಮತ್ತು ಮೊಹರು

ಪ್ರತಿ:–
ಪ್ರಿನ್ಸಿಪಾಲರು,
_____
_____
_____